ಸಿ.ಸಿ. ನಂಬರ್ಃ**3052/2023**
ಸಿ.ಡಬ್ಲ್ಯೂಃ**3** ಪಿ.ಡಬ್ಲ್ಯೂಃ**3**

ಪ್ರಧಾನ ದಿವಾಣಿ ಹಾಗೂ ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ ಇವರ ನ್ಯಾಯಾಲಯದಲ್ಲಿ,

ಧಾರವಾಡ

ಸಿ.ಸಿ. ನಂಬರ್ಃ**3052/2023**

| | |
|---|---|
| ಸಾಕ್ಷಿಯ ಹೆಸರು | : ಮಂಜುನಾಥ |
| ತಂದೆಯ ಹೆಸರು | : ಫಕ್ಕೀರಗೌಡ ಹಾವೇರಿ |
| ವಯಸ್ಸು | : 45 ವರ್ಷ |
| ಉದ್ಯೋಗ | : ಖಾಸಗಿ ಕೆಲಸ |
| ವಾಸಸ್ಥಳ | : ಹುಬ್ಬಳ್ಳಿ |

ದಿಃ **03-12-2025** ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

ನನಗೆ ಚಾಸಾ.1 ಮತ್ತು 2 ರವರ ಪರಿಚಯವಿರುವುದಿಲ್ಲ. ಸಾಕ್ಷಿಯು ಜಪ್ತಿ ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿದೆ, ಸಾಕ್ಷಿಯ ಸಹಿಯನ್ನು ನಿಪಿ.3(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಗೋಕುಲ ರಸ್ತೆಯ ಹೊಸ ಬಸ್ ನಿಲ್ದಾಣದಲ್ಲಿ ನಾನು ಕೆಲಸ ಮುಗಿಸಿಕೊಂಡು ಹೋಗುವಾಗ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಯಾರು ಏಕೆ ತೆಗೆದುಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಹಾಗೂ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿಲ್ಲ. ನಿಪಿ.3 ರ ಅಂಶಗಳು ನನಗೆ ಗೊತ್ತಿಲ್ಲ. 2 ರಿಂದ 6,8 ಮತ್ತು 9 ನೇ ಆರೋಪಿತರ ಪರಿಚಯ ಇರುವುದಿಲ್ಲ.

ಸಿ.ಸಿ. ನಂಬರ್‌ಃ**3052/2023**
ಸಿ.ಡಬ್ಲ್ಯುಃ**3** ಪಿ.ಡಬ್ಲ್ಯುಃ**3**

***(****ಈ ಹಂತದಲ್ಲಿ ಮಾನ್ಯ ಸಸಅ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ನೀಡಲಾಯಿತು.)*

ಪಾಟೀಸವಾಲುಃ ಶ್ರೀ.ಸ.ಸ.ಅ. ಅವರಿಂದಃ

ದಿಃ 18-06-2022 ರಂದು ರಾತ್ರಿ 8.00 ರಿಂದ 10.00 ಗಂಟೆಯವರೆಗೆ ನನ್ನ ಹಾಗೂ ಚಾಸಾ.2 ರವರ ಸಮಕ್ಷಮ 2 ರಿಂದ 6,8 ಮತ್ತು 9 ನೇ ಆರೋಪಿತರು ಹಾಜರು ಪಡಿಸಿದ 7 ಮೊಬೈಲ್ ಫೋನ್ ಗಳನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅವುಗಳ ಪೈಕಿ ಎರಡು ವಿವೋ ಮೊಬೈಲ್ , ಒಂದು ಇನಪಿನಿಕ್ಸ್, 3 ರೆಡಮಿ ಮೊಬೈಲ್ ಗಳು ಹಾಗೂ ಒಂದು ರಿಯಲ್ ಮಿ ಇದ್ದವು ಎಂದರೆ ಸರಿ. ಆ ದಿನ ಸದರಿ ಮೊಬೈಲ್ ಗಳನ್ನು ಹಾಜರು ಪಡಿಸಿದ ವ್ಯಕ್ತಿಗಳು ಈ ದಿನ ನ್ಯಾಯಾಲಯದಲ್ಲಿ ಹಾಜರು ಇರುವ ಆರೋಪಿತರು ಇರುತ್ತಾರೆ ಎಂದರೆ ಸರಿಯಲ್ಲ. ಅವರಲ್ಲಿ ನಾಲ್ಕು ಜನ ಆರೋಪಿತರು ಬಂದಿಲ್ಲ ಎಂದರೆ ಗೊತ್ತಿಲ್ಲ. ಆ ದಿನ ಪಂಚನಾಮೆಗೆ ನನ್ನ ಹಾಗೂ ಚಾಸಾ.2 ರವರ ಸಮಕ್ಷಮ ಬರೆದರು ಮತ್ತು ಓದಿ ಹೇಳಿದರು ಎಂದರೆ ಸರಿಯಲ್ಲ. ಎಲ್ಲ ಗೊತ್ತಿದ್ದರೂ ಸಹ, ಪಂಚನಾಮೆಗೆ ಹಾಜರು ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿ ಪರ ವಕೀಲರು ಏನು ಇಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.